ಪ್ರಶ್ನೆ ಸಂಖ್ಯೆ 89 (80) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)

ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರುಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ) ರಾಜ್ಯದಲ್ಲಿ ಪ್ರವಾಸೋದ್ಯಮವನ್ನು ಉತ್ತಮ ಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು

ಆ) ಯಾವ ಯಾವ ಪ್ರದೇಶಗಳು ಪ್ರವಾಸಿ ಕೇಂದ್ರಗಳಾಗಿವೆ,

ಇ) ರಾಜ್ಯದಲ್ಲಿರುವ ಪ್ರವಾಸೋದ್ಯಮದ ಹೋಟೆಲ್‌ಗಳು ಎಷ್ಟು,

ಈ) ಪ್ರವಾಸೋದ್ಯಮ ಇಲಾಖೆ ಖಾಸಗಿಯವರಿಗೆ ಕೊಟ್ಟಿರುವ ಹೋಟೆಲ್‌ಗಳು ಎಷ್ಟು,

ಉ) ಅವು ಯಾವುವು?

ಶ್ರೀ ಬಿ ಶ್ರೀರಾಮುಲು

ಅ) ರಾಜ್ಯದಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿ ಪಡಿಸಲು ಇಲಾಖೆಯು ಎರಡು ಪ್ರಮುಖ ಮಾರ್ಗಗಳನ್ನು ಅನುಸರಿಸುತ್ತಿದೆ

1 ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಪ್ರವಾಸಿ ಮಾರುಕಟ್ಟೆಗಳಲ್ಲಿ ನೇರವಾಗಿ ಭಾಗವಹಿಸಿ ರಾಜ್ಯ ಪ್ರವಾಸಿ ತಾಣಗಳ ಬಗ್ಗೆ ಪ್ರಚಾರ ಹಾಗೂ ಜಾಹೀರಾತು ನೀಡುವುದು ಈ ಮೂಲಕ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರನ್ನು ರಾಜ್ಯಕ್ಕೆ ಆಕರ್ಷಿಸುವುದು

2 ಪ್ರವಾಸಿ ತಾಣಗಳಲ್ಲಿ ಪ್ರವಾಸಿಗರ ಸಾಂದ್ರತೆಯನ್ನು ಅನುಸರಿಸಿ, ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು ಇದಲ್ಲದೆ ಮಾರ್ಗಸೂಚಿ ಫಲಕಗಳು, ಹೋರ್ಡಿಂಗ್‌ಗಳ ಅಳವಡಿಕೆ ಹಾಗೂ ರಸ್ತೆ ಬದಿ ಸೌಲಭ್ಯಗಳ ನಿರ್ಮಾಣ ಇತ್ಯಾದಿ ಕ್ರಮಗಳನ್ನು ಇಲಾಖೆಯು ಕೈಗೊಳ್ಳುತ್ತಿದೆ

ಋ) ಪ್ರಸಿದ್ಧ ಪ್ರವಾಸಿ ಸ್ಥಳಗಳಾದ ಬೇಲೂರು, ಹಳೇಬೀಡು, ಶ್ರವಣ ಬೆಳಗೊಳ, ಶ್ರೀರಂಗಪಟ್ಟಣ, ಮೈಸೂರು, ಕೆ ಆರ್ ಎಸ್ , ನಂಜನಗೂಡು, ಬಿ ಆರ್ ಹಿಲ್ಸ್, ಎಂ ಎಂ ಹಿಲ್ಸ್, ಬಾದಾಮಿ ಪಟ್ಟದ ಕಲ್ಲು, ಐಹೊಳೆ, ಹಂಪಿ, ಬಿಜಾಪುರ ಬೀದರ್ ಇತ್ಯಾದಿ 257 ಕ್ಕೂ ಹೆಚ್ಚು ಪ್ರವಾಸಿ ಕೇಂದ್ರಗಳನ್ನು ಪ್ರವಾಸೋದ್ಯಮ ನೀತಿಯಡಿ ಗುರುತಿಸಲಾಗಿದೆ (ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ)

ಇ) ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಒಟ್ಟು 40 ಹೋಟೆಲ್‌ಗಳು ಇವೆ

ಈ) ಖಾಸಗೀಕರಣಗೊಳಿಸಿರುವ ಹೋಟೆಲ್‌ಗಳ ಸಂಖ್ಯೆ 24

ಉ) ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ

ಅನುಬಂಧ–2

ಈ ಕೆಳಕಂಡ ಸ್ಥಳಗಳಲ್ಲಿನ ಸೌಲಭ್ಯಗಳನ್ನು ನಿಗಮದ ವತಿಯಿಂದ ಖಾಸಗೀಕರಿಸಲಾಗಿರುವ ಪಟ್ಟಿ

1 ಅನ್‌ಮೋಡ್	2 ಹುನುಗುಂದ
3 ಲೋಕಾಪುರ	4 ಮೊದಲಘಟ್ಟ
5 ರಾಮನಗರ (ಉ ಕ)	6 ಸೌಂದತ್ತಿ
7 ತೋರಣಗಲ್	8 ಆಗುಂಬೆ
9 ಬಿ ಆರ್ ಹಿಲ್ಸ್	10 ಬಸವಕಲ್ಯಾಣ
11 ಮೇಲುಕೋಟೆ	12 ಸೋಮೇಶ್ವರ
13 ತನ್ನಿಕೊಳ್ಳ	14 ಉಡುಪಿ

15 ಮಂಗಳೂರು 16 ಗುಲ್ಬರ್ಗ–1

17 ಬೆಳಗಾಂ 18 ಬೀದರ್

19 ದೇವರಾಯನದುರ್ಗ 20 ಧಾರವಾಡ

21 ಶಿಂಷಾ 22 ಹಾಸನ

23 ಗುಲ್ಬರ್ಗಾ–2 24 ಮಲ್ಲೇಕಾಮನಹಳ್ಳಿ

ಉಳಿದ 16 ಹೋಟೆಲ್ ಸೌಲಭ್ಯಗಳನ್ನು ನಿಗಮದಿಂದಲೇ ನಡೆಸಲಾಗುತ್ತಿದೆ

ಪ್ರಶ್ನೆ ಸಂಖ್ಯೆ 90 (61) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ) ಬೆಂಗಳೂರು ನಗರದಲ್ಲಿ ಎಷ್ಟು ಆಪಾರ್ಟ್‌ಮೆಂಟ್‌ಗಳಿವೆ,

ಆ) ಬೆಂಗಳೂರು ನಗದಲ್ಲಿ ಇರುವ ಮೇಲು ಸೇತುವೆ ರಸ್ತೆಗಳೆಷ್ಟು ಹಾಗೂ ಮುಂದೆ ನಿರ್ಮಿಸಲಿರುವ ಮೇಲು ಸೇತುವೆ ಸಂಖ್ಯೆಗಳೆಷ್ಟು,

ಇ) ಬೆಂಗಳೂರಿನ ಜನಸಂಖ್ಯೆಗೆ ಆಧಾರವಾಗಿ ಬೆಂಗಳೂರಿನಲ್ಲಿ ಎಷ್ಟು ಹೊಸ ಬಡಾವಣೆಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನಿರ್ಮಾಣ ಮಾಡಲಿದೆ,

ಈ) ಇದುವರೆವಿಗೆ ಎಷ್ಟು ಒತ್ತುವರಿ ಜಮೀನನ್ನು ವಶಪಡಿಸಿಕೊಳ್ಳಲಾಗಿದೆ, ಈ ಒತ್ತುವರಿ ಜಮೀನನ್ನು ಯಾವ ರೀತಿ ಉಪಯೋಗಿಸಲಾಗುವುದು,

ಉ) ಬೆಂಗಳೂರು ಸಮಗ್ರ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?